ದಿನಾಂಕ 05.08.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀಮತಿ ವೈ ಕೆ ಎಸ್ ವಕೀಲರಿಂದಃ

5. ಯಾವುದಾದರೂ ಸ್ವತ್ತನ್ನು ಖರೀದಿ ಮಾಡ ಬೇಕಾದರೆ ದಾಖಲಾತಿಗಳನ್ನು ಪರಿಶೀಲನೆ ಮಾಡಿ ವ್ಯವಹಾರ ಮಾಡುತ್ತಾರೆ ಎಂದರೇ ಸರಿ. ಪ್ರತಿವಾದಿ ಜೊತೆ ಕರಾರು ಮಾಡಿಕೊಳ್ಳುವಾಗ ದಾಖಲಾತಿಗಳನ್ನು ಪರಿಶೀಲನೆ ಮಾಡಲು ತೊಂದರೆ ಇತ್ತ ಎಂದರೇ ಅವರ ಹತ್ತಿರ ಆ ಸಮಯದಲ್ಲಿ ದಾಖಲೆಗಳು ಇರಲಿಲ್ಲ. ಆ ಸಮಯದಲ್ಲಿ ನೀವು ಪಹಣಿ ಪತ್ರಿಕೆಗಳನ್ನು ನೋಡಿದ್ದೀರ ಎಂದರೇ 6 ತಿಂಗಳ ಮೇಲೆ ನೋಡಿದ್ದೇನೆ. ಮೊದಲೇ ನೋಡಿದ್ದರು ಸಹ 6 ತಿಂಗಳ ಮೇಲೆ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ಮೊದಲೇ ಪ್ರತಿವಾದಿ Corporation Bank, ಅಬ್ಬರೂ ಶಾಖೆಯಲ್ಲಿ 5 ಲಕ್ಷ ಸಾಲ ಪಡೆದಿದ್ದರು ಎಂದರೇ ಹೌದು. ಆ ವಿಚಾರ ನಿಮಗೆ ಮೊದಲೆ ಗೊತ್ತಿತ್ತು ಎಂದರೇ ಇಲ್ಲ. ಕ್ರಯ ಕರಾರು ಪತ್ರಕ್ಕೆ ಪ್ರತಿವಾದಿಯ ತಾಯಿ ಮತ್ತು ಕಾಳೇಗೌಡ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ.

6. ಕರಾರು ಆಗುವ ಪ್ರತಿವಾದಿಯ ತಾಯಿ ನನಗೆ ಬಡ್ಡಿಗೆ ಎಂದು ಹೇಳಿ 2 ಚೆಕ್ಕುಗಳನ್ನು ಕೊಟ್ಟಿದ್ದರು ಎಂದರೇ ಹೌದು. ಅವುಗಳ ಸಂಖ್ಯೆ 548041 ಮತ್ತು 548042 ಆಗಿದೆ ಎಂದರೇ ಸರಿ. ಖರೀದಿ ಮಾಡಲು ಪಡೆದುಕೊಂಡಿಲ್ಲ ಹಣದ ಭದ್ರತೆಗಾಗಿ ಕರಾರು ಪತ್ರ ವನ್ನು ಬರೆದುಕೊಟ್ಟಿದ್ದಾರೆಂದರೇ ಸಾಕ್ಷಿ ಕ್ರಯ ಪತ್ರ ಬರೆದುಕೊಡುವರಗೆ ನಿಮ್ಮ ಹತ್ತಿರ ಇರಲಿ ಎಂದು ಹೇಳಿದ್ದಾರು. ಕ್ರಯ ಕರಾರು ಪತ್ರದಲ್ಲಿ ಚೆಕ್ಕುಗಳ ಬಗ್ಗೆ ತೋರಿಸಿದ್ದೀರ ಎಂದರೇ ನೆನಪಿಲ್ಲ. ಬಡ್ಡಿಗೋಸ್ಕರ ಪಡೆದುಕೊಂಡಿದ್ದು ಆಗಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ಚೆಕ್ಕುಗಳನ್ನು ಬಡ್ಡಿ ವ್ಯವಹಾರಕ್ಕಾಗಿ ಪಡೆದಿದ್ದೆ ಎಂದರೇ ಸರಿಯಲ್ಲ. ಹಣದ ಭದ್ರತೆಗಾಗಿ ಚೆಕ್ಕುಗಳನ್ನು ಪಡೆದಿದೆ ಎಂದರೇ ಸುಳ್ಳು. ಕ್ರಯ ಮಾಡಿಕೊಡುತ್ತೇವೆ ಎಂದು ಹೇಳಿದ್ದರು. ಈಗ ಆ ಸ್ವತ್ತು ಬೆಲೆ ಬಾಳುತ್ತದೆ ಎಂದರೇ ನನಗೆ ಗೊತ್ತಿಲ್ಲ. ತೆಂಕನಹಳ್ಳಿ

ಅಪ್ಪಾಜಿ ಗೊತ್ತಾ ಎಂದರೇ ಹೌದು. ಇದೇ ರೀತಿ ಅವರ ಜೊತೆಯಲ್ಲೂ ಸಹ ಜಮೀನಿಗಾಗಿ ಕ್ರಯ ಕರಾರು ಪತ್ರ ಮಾಡಿಕೊಂಡಿದ್ದೇನೆ ಎಂದರೇ ಜಮೀನನ್ನು ಮಾರಾಟ ಮಾಡುತ್ತೇನೆ ಎಂದು ಬಂದಿದ್ದರು ಆದ ಕಾರಣ ಮಾಡಿಕೊಂಡಿದ್ದೇನೆ. ಆ ಪ್ರಕರಣವು ಸಹ ಈ ನ್ಯಾಯಾಲಯದಲ್ಲಿ ಇದೆ ಎಂದರೇ ಹೌದು. ಓ ಎಸ್ ನಂ.151/2021 ಎಂದರೇ ಸರಿ. ಆ ಸ್ವತ್ತು 1 ಗುಂಟೆಗೆ 10 ಲಕ್ಷ ಬೆಲೆ ಬಾಳುತ್ತಿದ್ದು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ಆ ಸ್ವತ್ತು 1 ಗುಂಟೆಗೆ 10 ಲಕ್ಷ ಬೆಲೆ ಬಾಳುತ್ತಿದ್ದು ಅದನ್ನು ಕಬಾಳಿಸುವ ಉದ್ದೇಶದಿಂದ ನ್ಯಾಯಾಲಯದಂಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ಈಗಲೂ ಸಹ ಪ್ರತಿವಾದಿ ಜಮೀನಿನಲ್ಲಿ ಬೋರ್ ಹಾಕಿಸಿದ್ದಾರೆ ಎಂದರೇ ಬರೆದುಕೊಟ್ಟ ನಂತರ ಹಾಕಿಸಿದ್ದಾರೆ. ಜಗಳ ಆಗುತ್ತದೆ ಎಂದು ನಾವು ಕೇಳಿರುವುದಿಲ್ಲ. ಬಡ್ಡಿಗಾಗಿ ಹಣ ಕೊಟ್ಟಿರುವ ಕಾರಣ ಪ್ರತಿವಾದಿ ಬೋರ್ ಹಾಕಿಸುವಾಗ ನಾವು ಪ್ರಶ್ನೆ ಮಾಡಿಲ್ಲ ಎಂದರೇ ಸುಳ್ಳು.

7. ಪ್ರತಿವಾದಿಯು ನನ್ನ, ನನ್ನ ಮಗಳ ಹಾಗೂ ಸೊಸೆಯ ಖಾತೆಗೆ ದಾವೆ ಹೂಡುವ ಸಮಯದಲ್ಲಿ ಸಹ 18 ಸಾವಿರ ಬಡ್ಡಿ ಹಣ ಹಾಕಿದ್ದಾರೆ ಎಂದರೆ ಸುಳ್ಳು. ಬಡ್ಡಿ ಹಣದ ಭದ್ರತೆಗಾಗಿ ಕ್ರಯ ಕರಾರನ್ನು ಬರೆಸಿಕೊಂಡಿದ್ದೇನೆ ಎಂದರೇ ಸುಳ್ಳು. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ನನ್ನ, ನನ್ನ ಮಗಳ ಹಾಗೂ ಸೊಸೆಯ ಖಾತೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇದೆಯಾ ಎಂದರೇ ಇಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)